ಈ ಹಂಡ್ಕೋ–ಜನತಾ ಮನೆಗಳನ್ನು ರಾಜ್ಯಾದ್ಯಂತ ಹೊಂದಿದವರು, ಬಡ ಕೃಷಿಕಾರ್ಮಿಕ, ಹಿಂದುಳಿದ, ಅಲ್ಪ ಸಂಖ್ಯಾತರು, ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರೇ ಹೆಚ್ಚು ಇರುವರು. ಈ ಹಿಂದೆ ಭೂಸುಧಾರಣಾ ಕಾಯಿದೆಯಲ್ಲಿ ಬಡ, ಚಿಕ್ಕ ರೈತ, ಸಣ್ಣ ರೈತರಿಗೆ ಜಮೀನಿನ ಮೌಲ್ಯವನ್ನು ಸರ್ಕಾರ ಮಾಫಿ ಮಾಡಿ, ಉಚಿತ ಜಾತಿ ವಗೈರೆ ಸರ್ಕಾರ ನೀಡಿರುವಾಗ ಈ ಒಂದು ಬಡ ನಿವೇಶನದಾರರ ಹುಡ್ಕೋ–ಜನತಾ ಮನೆಗಳ ಮೇಲೆ ೧೫ ವರ್ಷಗಳ ಹಿಂದಿನಿಂದ ವಸೂಲಿಗೆ ಕ್ರಮ ಕೈಗೊಳ್ಳದೆ, ಈಗ ಒಮ್ಮೆಲೆ ವಸೂಲಿಗೆ ತಗಾದೆ ಹೊರಿಸಿರುವುದರಿಂದ ಬಡ ನಿವೇಶನದಾರರು ದಿಗ್‌ಭ್ರಾಂತರಾಗಿರುವರು. ಮತ್ತು ಈಗಾಗಲೇ ಕಳೆದ ಎರಡು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರಗಾಲ ಆವರಿಸಿ ಬರಗಾಲದಿಂದ ಈ ನಿವೇಶನಗಾರರು ಕೃಷಿ ಕಾರ್ಮಿಕ, ಕೂಲಿ ವಗೈರೆ ಇಲ್ಲದೆ. ಹೊಟ್ಟೆಗೂ ಹಿಟ್ಟಿಲ್ಲದೆ ಅಲೆಮಾರಿಗಳಾಗಿರುವ ಪರಿಸ್ಥಿತಿ ಇರುವುದರಿಂದಲೂ ಈ ಬಾಕಿ ಕಂತಿನ ನಿಲವನ್ನು ಸಂಪೂರ್ಣ ಮಾಫಿ ಮಾಡಿ ವಜಾಗೊಳಿಸುವ ಆಜ್ಞೆ ನೀಡುವಂತೆ ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

೧–೩೦ ಪಿ.ಎಂ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).— ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯ ಮಾನ್ಯ ವಸತಿ ಮಂತ್ರಿಗಳಿಗೆ ಸಂಬಂಧಪಟ್ಟಿದ್ದು. ಅವರಿಂದ ಉತ್ತರ ತರಿಸಿ ಕೊಡುತ್ತೇನೆ.

2 ಸಹಕಾರ ಸಂಸ್ಥೆಗಳ ಮಹಾ ಸಭೆಯನ್ನು ಡಿಸೆಂಬರ್ ತಿಂಗಳ ಅಂತ್ಯದಲ್ಲಿ ನಡೆಸುವಂತೆ ಒತ್ತಾಯಿಸುವುದು

ಶ್ರೀ ಜೆ ಎಸ್. ಆಚಾರ್ (ಬೈಂದೂರ್).—ಮಾನ್ಯ ಅಧ್ಯಕ್ಷರೇ, ಸಹಕಾರ ಸಂಸ್ಥೆಗಳಲ್ಲಿ ಗ್ರಾಮ ಮಟ್ಟದಿಂದ ತಾಲ್ಲೂಕು ಮಟ್ಟಕ್ಕೆ ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ, ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟಕ್ಕೆ ಆಯಾ ಹಂತದ ಸಂಘಗಳ ಮಹಾಸಭೆ ಜರುಗಿದಾಗ ಹಿಂದಿನ ಪ್ರತಿನಿಧಿಗಳೇ ಹೋಗದೆ ಆಯಾ ಸಂಘಗಳ ಮಹಾಸಭೆ ಜರುಗಿದ ಬಳಿಕ ಪದಾಧಿಕಾರಿಗಳ ಆಯ್ಕೆ ನಡೆದು, ಈ ಪ್ರತಿನಿಧಿಗಳು ಆಯ್ಕೆ ಆಗಿ, ಸಂಯೋಜಿತ ಸಂಸ್ಥೆಗಳ ಮಹಾಸಭೆಯಲ್ಲಿ ಹಾಗೂ ಚುನಾವಣೆ ಇದ್ದಲ್ಲಿ ಚುನಾವಣೆಯಲ್ಲಿ ಪಾಲುಗೊಳ್ಳಬೇಕು ಎಂಬ ವಿಚಾರವನ್ನು ಕಳೆದೆರಡು ವರ್ಷಗಳಿಂದ ಮಾನ್ಯ ಸಹಕಾರಿ ಸಚಿವರ ಗಮನಕ್ಕೆ ತರಲಾಗುತ್ತಿದೆ. ಕಳೆದ ವರ್ಷ ಈ ತತ್ವವನ್ನು ಒಪ್ಪಿಕೊಂಡು ಪ್ರಾಥಮಿಕ ಸಂಘಗಳ ಮಹಾಸಭೆಯನ್ನು ಸೆಪ್ಟೆಂಬರ್ ತಿಂಗಳ ಅಂತ್ಯದ ಒಳಗೆ ತಾಲ್ಲೂಕು ಮಟ್ಟದ ಸಂಘಗಳ ಮಹಾಸಭೆಯನ್ನು ಅಕ್ಟೋಬರ್ ತಿಂಗಳ ಅಂತ್ಯದ ಒಳಗೆ, ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳ ಮಹಾಸಭೆಯನ್ನು ನವೆಂಬರ್ ತಿಂಗಳ ಅಂತ್ಯದೊಳಗೆ, ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳ ಮಹಾಸಭೆಯನ್ನು ಡಿಸೆಂಬರ್ ತಿಂಗಳ ಅಂತ್ಯದ ಒಳಗೆ ನಡೆಸಬೇಕೆಂದು ಸರ್ಕಾರಿ ಆಜ್ಞೆ ನೀಡಲಾಗಿತ್ತು. ಈ ಆಜ್ಞೆ ಕಳೆದ ವರ್ಷಕ್ಕೆ ಮಾತ್ರ ಸೀಮಿತವಾಗಿತ್ತು. ಈ ಆಜ್ಞೆಯ ಹಿಂದಿರುವ ಉದ್ದೇಶ ಉತ್ತಮವಾಗಿರುವುದರಿಂದ ಈ ವರ್ಷ ಹಾಗೂ ಮುಂದಿನ ವರ್ಷಗಳಲ್ಲಿ ಸಹಾ ಅದೇ ರೀತಿ ಮಹಾಸಭೆ ಜರುಗಿಸುವಂತೆ ಆಯಾ ಸಂಸ್ಥೆಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಹಿಂದಿನ ವರ್ಷದಂತೆ ಈ ವರ್ಷವೂ ವಿವಿಧ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಗಳನ್ನು ನಡೆಸಲು ಕಾಲಾವಕಾಶ ನೀಡುವ ಬಗ್ಗೆ ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

3 ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಭಟ್ಟರ–ಹಳ್ಳಿಯಲ್ಲಿ ಸೋಮಯ್ಯನ ಕಟ್ಟಿ ಕೆರೆಯನ್ನು ಸಾಗುವಳಿ ಮಾಡಿದ್ದರಿಂದ ತೊಂದರೆಯಾಗಿರುವುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಮಾನ್ಯ ವಿರೋಧ ಪಕ್ಷದ ನಾಯಕಿಯವರು).—ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು ಹೋಬಳಿಯ ಭಟ್ಟರ ಹಳ್ಳಿಯಲ್ಲಿ ವಾಸವಾಗಿರುವ ಶ್ರೀ ಜಿ. ಮಲ್ಲಾ ಮಂನಿಸ್ವಾಮಿಯವರು ಹುಳಿಯಾರಿನಲ್ಲಿ ಪ್ರಾಥಮಿಕ

ಶಾಲಾ ಉಪಾಧ್ಯಾಯರಾಗಿದ್ದ ಸದರಿ ಗ್ರಾಮದ ಸರ್ವೆ ನಂಬರ್ ೬೮ರಲ್ಲಿನ ಸೋಮಯ್ಯನ ಕಟ್ಟೆ ಎಂಬ ಕೆರೆಯನ್ನು ಸಾಗು ಮಾಡಿಕೊಂಡು ಸದರಿ ಕೆರೆಗೆ ಬರತಕ್ಕ ನೀರನ್ನು ತಡೆದು ತನ್ನ ಒತ್ತುವರಿ ಜಮೀನಿಗೆ ಉಪಯೋಗಿಸಿಕೊಂಡು ಆಲ್ಲಿನ ನೂರಾರು ಜನರಿಗೆ ತೊಂದರೆ ಕೊಡುತ್ತಿದ್ದಾರೆ ಹಾಗೂ ಪೋಲೀಸ್ ಠಾಣೆ ಮತ್ತು ಕೋರ್ಟಿಗೆ ಸುತ್ತಮುತ್ತಲಿನ ಜನತೆಯನ್ನು ಅಲೆಯುವಂತೆ ಮಾಡುತ್ತಿದ್ದಾರೆ. ಇವರು ಹರಿಜನ ಸ್ತ್ರೀಯಿಗಳೆಂದು ಅಲ್ಲಿನ ಜನತೆಯನ್ನು ವಂಚಿಸುತ್ತಿದ್ದಾರೆ. ಸರ್ಕಾರಿ ನೌಕರರಾಗಿದ್ದು ಕೆವುಡಂ ಪೂಂಗರ ಶಾಲೆಯನ್ನು ತೆರೆಯಲು ಸರ್ಕಾರದಿಂದ ಅನುಮತಿ ಕೋರಿ ಉಪಾಧ್ಯಾಯರಿಂದ ಡೊನೇಷನ್ ವಸೂಲು ಮಾಡುವುದು ಸುತ್ತಮುತ್ತಲ ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಸರ್ವೆ ನಂಬರ್ ೧೬೭ರಲ್ಲಿ ಬಾವಿ ತೆಗೆಸಿ ಸಾಗುವಳಿ ಮಾಡಿಸುತ್ತಿದ್ದು ಭೂ ಅಭಿವೃದ್ಧಿ ಬ್ಯಾಂಕಿನವರಿಗೆ ಬಾವಿಯಲ್ಲಿ ನೀರಿಲ್ಲ ಎಂದು ಹೇಳಿ (ಬಾವಿ ನೀರನ್ನು ಕೆರೆಗೆ ಹೊಡೆಸಿ) ಸಾಲಾ ಮನ್ನಾ ಮಾಡುವಂತೆ ಅಧಿಕಾರಿಗಳ ಮೇಲೆ ಒತ್ತಡ ತರುತ್ತಿದ್ದಾರೆ. ಸಾರ್ವಜನಿಕ ಕೆರೆ ವಿಸ್ತೀರ್ಣವನ್ನು ಸಂಪೂರ್ಣವಾಗಿ ಒಡೆಸಿ ಸಾಗು ಮಾಡುವ ಸನ್ನಾಹವನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ. ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ನಾನು ಸಂಬಂಧಪಟ್ಟ ಮಂತ್ರಿಗಳಿಂದ ಪೂರ್ಣ ಉತ್ತರ ತರಿಸಿಕೊಡುತ್ತೇನೆ.

ಶ್ರೀಮತಿ ನಾಗರತ್ನಮ್ಮ.—ಯಾವತ್ತು ?

ಶ್ರೀ. ಎ. ಲಕ್ಷ್ಮೀಸಾಗರ್.—ನಾಳೆ.

4 ವ್ಯವಸಾಯೋತ್ಪನ್ನಗಳ ಮೇಲೆ ಖರೀದಿದಾರರು ಮಾರುಕಟ್ಟೆ ಸಮಿತಿಗೆ ಕರವನ್ನು ತುಂಬಬೇಕಾಗಿರುವುದು.

ಶ್ರೀ ಎಂ. ಎಸ್. ಪಾಟೀಲ್.—ಕರ್ನಾಟಕ ರಾಜ್ಯದ ಮಾರುಕಟ್ಟೆ ಇಲಾಖೆಯ ಹೊಸ ಆದೇಶದ ಅನುಷ್ಠಾನ ವಿಪರೀತವಾಗಿ ಪರಿವರ್ತನೆಗೊಂಡಿದ್ದು ರೈತರಿಂದ ಕಮಿಷನ್ ತೆಗೆದುಕೊಳ್ಳುವುದನ್ನು ನಿಷೇಧಿಸಲಾಗಿದ್ದ ವ್ಯವಸಾಯೋತ್ಪನ್ನದ ಮೇಲೆ ಖರೀದಿದಾರರು ಮಾರುಕಟ್ಟೆ, ಸಮಿತಿಗೆ ಕರವನ್ನು ತುಂಬಬೇಕಾಗಿದೆ. ಆದರೆ ವ್ಯಾಪಾರಸ್ಥರಿಂದ ರೈತರು ಮಾರುತ್ತಿರುವ ಮಾಲಿನ ವ್ಯವಹಾರದಲ್ಲಿ ಮೊದಲಿನಂತೆಯೇ ರೈತರಿಂದಲೇ ಕರವನ್ನು ವಸೂಲ್ಮಾಡುತ್ತಿರುವುದು ಕಂಡು ಬಂದಿದೆ. ಕಾನೂನಿನ ದೃಷ್ಟಿಯಲ್ಲಿ ವ್ಯಾಪಾರಸ್ಥರೇ ಸದರಿ ಕರವನ್ನು ಕೊಡುತ್ತಿರುವುದಾಗಿ ಕಂಡು ಬರುತ್ತಿದ್ದು ಹೊಸ ಕಾನೂನಿನಿಂದ ಇದು ತಿರುಮುರುವಾಗಿದ್ದು ರೈತ ವರ್ಗಕ್ಕೆ ಬಹಳ ತೊಂದರೆಯಾಗಿದೆ. ಆದಕಾರಣ ಸರಕಾರ ಕೂಡಲೇ ಈ ವಿಷಯವನ್ನು ಮರು ಪರಿಶೀಲಿಸಿ ಈಗ ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸುವ ಬಗ್ಗೆ ಸದನಕ್ಕೆ ಹೇಳಿಕೆ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—(ಮಾರುಕಟ್ಟೆ ರಾಜ್ಯ ಸಚಿವರು).—ಅವರ ಲಿಖಿತ ಹೇಳಿಕೆಯನ್ನು ಲಗತ್ತಿಸಿದೆ.

ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ ೧೯೬೨ರ ಪ್ರಕರಣ ೭೮ಕ್ಕೆ ದಿನಾಂಕ ೧೭-೬-೧೯೬೫ರಂದು ತಿದ್ದುಪಡಿ ಮಾಡಿ, ರೈತರು ದಲ್ಲಾಳಿಗಳಿಗೆ ಕೊಡಬೇಕಾಗಿರುವ ಶೇಕಡಾ ಎರಡು ರೂಪಾಯಿಗಳ ದಲ್ಲಾಳಿಯನ್ನು ಖರೀದಿದಾರರಿಂದ ವಸೂಲಿ ಮಾಡಲು ನಿಗಧಿಪಡಿಸಲಾಗಿದೆ.

ಈ ಬದಲಾದ ನಿಯಮದ ನಿಬಂಧನೆಯ ಉಪಯುಕ್ತತೆಯನ್ನು ರೈತರಿಗೆ ತಿಳುವಳಿಕೆ ನೀಡಲು ರಾಜ್ಯದಲ್ಲಿನ ಎಲ್ಲಾ ಮಾರುಕಟ್ಟೆ ಸಮಿತಿಗಳು ಧ್ವನಿವರ್ಧಕ, ಜಾಹೀರಾತು ಮತ್ತು ದಿನಪತ್ರಿಕೆಗಳ ಮೂಲಕ ಪ್ರಚಾರ ಮಾಡುತ್ತಿವೆ, ಈ ಬಗ್ಗೆ ಕೃಷಿ ಮಾರಾಟ ಮಂಡಳಿಯು ವಿವಿಧ ಮಾಧ್ಯಮಗಳಲ್ಲಿ ಪ್ರಚಾರ ಮಾಡುವುದರ ಮೂಲಕ ರೈತರಿಗೆ ಸೂಕ್ತವಾದ ತಿಳುವಳಿಕೆಯನ್ನು ನೀಡುತ್ತಿದೆ. ಮಾರುಕಟ್ಟೆ ಪ್ರಾಂಗಣಗಳಲ್ಲಿ ರೈತರ ಮಾಹಿತಿಗಾಗಿ ಜಾಹೀರಾತು ಫಲಕಗಳನ್ನು ಸ್ಥಾಪಿಸಿದೆ. ಇದೂ ಅಲ್ಲದೆ, ಮಂಡಳಿಯ ಪ್ರಚಾರ ವಿಭಾಗದವರು ಹಳ್ಳಿಗಳಲ್ಲಿ ಚಲನಚಿತ್ರ ಪ್ರದರ್ಶನ, ಸಭೆಗಳನ್ನು ಏರ್ಪಡಿಸುವುದು ಮತ್ತು ಕರಪತ್ರಗಳನ್ನು ಹಂಚುವುದರ ಮೂಲಕ ವ್ಯಾಪಕವಾದ ಪ್ರಚಾರ ಮಾಡುತ್ತಿದ್ದಾರೆ.